ಫಾರೆಸ್ಟ್ ಇಲಾಖಾ.

ಕಡೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರ್ ಸಾಹೇಬರವರ ಆಫೀಸ್.

ಇಸ್ತಿಹಾರ್.

ತಾರೀಖು 23ನೆ ಸೆಪ್ಟೆಂಬರ್ 1907.

ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟ್ ಮತ್ತು ಸ್ಟೇಟ್ ಫಾರೆಸ್ಟ್ ಗಳಲ್ಲಿಯೂ, ಆಕಾರ ಕಂಡ ಎಂಜರು ಜಮೀನುಗಳಲ್ಲಿಯೂ, ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿ ಬೇಲಿಗಳಲ್ಲಿಯೂ, ಅಮೃತಮಹಲ್ ಕಾವಲ್‌ಗಳಲ್ಲಿಯೂ, ದೊರಿಯುವ ಕೆಳಗೆ ವಿವರಿಸುವ ಪಸಾರೆ ಜಿನಸುಗಳನ್ನು 1907—08ನೆ ಸಾಲಿಗೆ ಜಮಾಯಿಸುವ ಹಕ್ಕನ್ನು ಬಹಿರಂಗವಾಗಿ ಈ ಕೆಳಗಿನ ತಪಶೀಲ್ ಪಟ್ಟಿಯಲ್ಲಿ ಕಾಣುವ ಆಫಿಸರರಿಂದ ತಾಲ್ಲೂಕ್‌ವಾರ್ ಯಾ ಹೋಬಳಿವಾರ್ ಹರಾಜು ಹಾಕಿಸಲ್ಪಡುತ್ತೆ.

ನಂಬರ್.	ತಾಲ್ಲೂಕುಗಳ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಲ್ಪಡುವ ಆಫಿಸರರ ಹೆಸರು.
1	ಮೂಡಿಗೆರೆ ...	11—11—07	ಅಯಾಯ ತಾಲ್ಲೂಕು ಕಛೇರಿಯಲ್ಲಿ	ಅಯಾಯ ತಾಲ್ಲೂಕು ಅಸಿಸ್ಟಂಟರು ಮತ್ತು ರೇಂಜ್ ಆಫಿಸರರಿಂದ.
2	ಚಿಕ್ಕಮಗಳೂರು ...	13—10—07		
3	ಕಡೂರು ...	15—11—07		
4	ತರೀಕೆರೆ ...	17—11—07		
5	ಯಡೇಹಳ್ಳಿ ಸಬ್ ತಾಲ್ಲೂಕು ...	18—11—07		
	ಕೊಪ್ಪ ...	20—11—07		

ಪಸಾರೆ ಜಿನಸಿಗಳ ತಪಶೀಲ್.

1. ತಾರೇಕಾಯಿ, 2. ಕೀಗೇಕಾಯಿ, 3. ಅಂಟವಾಳದಕಾಯಿ, 4. ದಿಂಡಿಗದ ಗೋಂದು, 5. ಕಾಡು ಅರಿಶಿನ, 6. ಜೇನು ಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲದಬೀಜ, 12. ಜಗಜೆ ಬೀಜ, 13. ಹೊಂಗೇಬೀಜ, 14. ಗೇರುಬೀಜ, 15. ಹಾಲುಮಡ್ಡಿ, 16. ಸಾರಗದಕೊಂಬು, 17. ಗುಗಳ, 18. ಬ್ಯಾಲದ ಹಂಣು, 19. ಸೀತಾಫಲದಹಂಣು, 20. ಅಳಲೇಕಾಯಿ, 21. ಹುಣಸೇಹಂಣು, 22. ಕಿರಿ ಈಚಲು, 23. ಗೇರು, 24. ಕಲ್ಲುಹುವ್ವು 25. ಕಲ್ನಾರು, 26. ಕಾಡು ಯಾಲಕ್ಕಿ.

2. ಚಡ ದರಖಾಸ್ತುದಾರನು ಹರಾಜು ಮಂಜೂರಾದ ಕೂಡ್ಲೇ ಶೇಕಡಾ 25 ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಅಲ್ಲದೇ ಕಂಟ್ರಾಕ್ಟ್ ಷರತ್ತು ವೇರೆ ನಡಿಯಲು ತಕ್ಕ ಖಾತರ ಜಾಮೀನು ಸಹಾ ಕೊಡಬೇಕು. ಹಾಗೆ ಮಾಡದೇ ತಪ್ಪಿದಲ್ಲಿ ಕೂಡ್ಲೇ ಬಾಬು 2ನೆ ದಫಾ ಹರಾಜು ಮಾಡಲ್ಪಟ್ಟು ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಮತ್ತು ಸದರೀ ಲುಕ್ಸಾನ್ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲ್ ಮಾಡಲ್ಪಡುತ್ತೆ.

3. ದರಖಾಸ್ತುದಾರನಿಗೆ ಹರಾಜು ಮಂಜೂರಾದ ಸಂಗತಿಯನ್ನು ತಿಳಿಸಿದ ಒಂದು ತಿಂಗಳ ವಳಗಾಗಿ ಬಾಕಿ ಮೊಬಲಗನ್ನೆಲ್ಲಾ ಪಾವತೀ ಮಾಡಬೇಕು. ತಪ್ಪಿದರೆ ಮೊದಲು ಕೊಟ್ಟಿದ್ದ $\frac{1}{4}$ ಹಿಸ್ಸೆ ಹಣವನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಬಾಕೀ ಆಗುವ ಹಣವನ್ನು ರೆವಿನ್ಯೂ ಕಂದಾಯದ ಬಾಕೀಯಂತೆ ವಸೂಲಿ ಮಾಡಲ್ಪಡುತ್ತೆ.

4. ಹರಾಜು ಮೊಬಲಗ್ಯೆ ರೂಪಾಯಿ 1ಕ್ಕೆ ಒಂದಾಣೆ ಲೋಕಲ್ ಸೆಸ್ಸು ಕೊಡಬೇಕು.

5. ಹಿಡುವಳೀ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಪಸಲನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರ್ರ ಸ್ಥಿರಪಟ್ಟ ಹಕ್ಕುದಾರಿ ವಿಷಯದಲ್ಲಿ ಇಜಾರೆದಾರ್ರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲದ ಉತ್ಪತ್ತಿ ಮೇಲ್ಕಂಡ ಹರಾಜಿಗೆ ಸೇರುವದಿಲ್ಲ.

8. ಹರಾಜು ಕಡೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಬಳಪಟ್ಟು ಇರುತ್ತೆ.

ಬಿ. ಹೀರಾಸಿಂಗ್,

ಫಾರ್ ಡೆಪ್ಯೂಟಿ ಕಮಿಷನರ್, ಕಡೂರು ಡಿಸ್ಟ್ರಿಕ್ಟ್.